# ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು

ದಿನಾಂಕ 11-10-2019

ಸಂಖ್ಯೆ: ಯುಎ-3/193/2019-20

ಶಿಕ್ಷಣ ಮಂಡಳಿ ಸದಸ್ಯರುಗಳಿಗೆ,

ಮಾನ್ಯರೆ,

ವಿಷಯ: ದಿನಾಂಕ: 16-09-2019ರಂದು ನಡೆದ ಶಿಕ್ಷಣ ಮಂಡಳಿ ಮೊದಲನೇ ಸಾಮಾನ್ಯ ಸಭೆಯ ನಡವಳಿಯನ್ನು ಕಳುಹಿಸುವ ಬಗ್ಗೆ.

* * * * *

ದಿನಾಂಕ 16-09-2019ರಂದು ಬೆಳಗ್ಗೆ 11-30 ಗಂಟೆಗೆ, ಕ್ರಾಫರ್ಡ್ ಭವನದ ಶಿಕ್ಷಣ ಮಂಡಳಿ ಸಭಾಂಗಣದಲ್ಲಿ ನಡೆದ, ಶಿಕ್ಷಣ ಮಂಡಳಿಯ ಮೊದಲನೇ ಸಾಮಾನ್ಯ ಸಭೆಯ ನಡವಳಿಗಳ ಪ್ರತಿಯನ್ನು ತಮ್ಮ ಮಾಹಿತಿಗಾಗಿ ಈ ಮೂಲಕ ಕಳುಹಿಸಿಕೊಡಲಾಗಿದೆ, ನಡವಳಿಯಲ್ಲಿ ಹೇಳಿರುವ ಯಾವುದೇ ಅಂಶದ ಯಥಾರ್ಥತೆಯ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳಿಂದ ನಡವಳಿಗಳನ್ನು ಕಳುಹಿಸಿದ ದಿನಾಂಕದಿಂದ 21 ದಿನಗಳ ಒಳಗಾಗಿ ಆಕ್ಷೇಪಣೆ ಬಾರದಿದ್ದಲ್ಲಿ, ನಡವಳಿಯಲ್ಲಿ ಹೇಳಿರುವ ಎಲ್ಲಾ ಅಂಶಗಳು ಸರಿಯಾಗಿವೆ ಎಂದು ಪರಿಗಣಿಸಲ್ಪಡುತ್ತವೆ, ಆದುದರಿಂದ, ನಡವಳಿಯ ಬಗ್ಗೆ ನಿಮ್ಮ ಆಕ್ಷೇಪಣೆ(ಗಳು) ಏನಾದರೂ ಇದ್ದಲ್ಲಿ, ಈ ಬಗ್ಗೆ "ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್‌ಭವನ, ಮೈಸೂರು" ಇವರನ್ನು ಉದ್ದೇಶಿಸಿ ಬರೆದ ಪತ್ರವನ್ನು ದಿನಾಂಕ 31-10-2019 ರೊಳಗಾಗಿ, ವಿಶೇಷಾಧಿಕಾರಿಗಳು, ಸಿಂಡಿಕೇಟ್ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್‌ಭವನ, ಮೈಸೂರು-570 005 ಇವರಿಗೆ ನೇರವಾಗಿ ತಲುಪಿಸುವಂತೆ ಕೋರಲಾಗಿದೆ.

ತಮ್ಮ ನಂಬುಗೆಯ

ವಿಶೇಷಾಧಿಕಾರಿ(ಪ್ರಾಧಿಕಾರ) 11/10

ಪ್ರತಿ:

1. ಘನತೆವೆತ್ತ ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – ಘನತೆವೆತ್ತ ರಾಜ್ಯಪಾಲರ ಅವಗಹಾನೆಗೆ ತರಬೇಕಾಗಿ ಕೋರಲಾಗಿದೆ.
2. ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ(ವಿಶ್ವವಿದ್ಯಾನಿಲಯ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಕುಲಸಚಿವರು(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ನಿರ್ದೇಶಕರು, ಪಿ.ಎಂ.ಇ.ಬಿ/ ಕಾಲೇಜು ಅಭಿವೃದ್ಧಿ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ನಿರ್ದೇಶಕರು, ವಿದ್ಯಾರ್ಥಿಕ್ಷೇಮಪಾಲನ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು.
6. ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರು(ಶೈಕ್ಷಣಿಕ/ಆಡಳಿತ/ಅಭಿವೃದ್ಧಿ/ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿಶೇಷ ಘಟಕ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ಕುಲಪತಿ/ಕುಲಸಚಿವ/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
8. ಕಛೇರಿ ಪ್ರತಿ.

AC Forwarding letter

# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್‌ಭವನದ ಶಿಕ್ಷಣ ಮಂಡಳಿ ಸಭಾಂಗಣದಲ್ಲಿ ದಿನಾಂಕ: 16-09-2019 ರಂದು ಪೂರ್ವಾಹ್ನ 11-30 ಗಂಟೆಗೆ ನಡೆದ ಶಿಕ್ಷಣ ಮಂಡಳಿಯ ಮೊದಲನೆಯ ಸಾಮಾನ್ಯ ಸಭೆಯ ನಡವಳಿ..

**ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳು**

| | | |
|---|---|---|
| 1. | ಪ್ರೊ. ಜಿ. ಹೇಮಂತ ಕುಮಾರ್ ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀ ಶಾಂತಕುಮಾರ. ಕೆ | ಸದಸ್ಯರು |
| 3. | ಶ್ರೀಮತಿ ಎಂ.ಎನ್.ಪೊನ್ನಮ್ಮ | ಸದಸ್ಯರು |
| 4. | ಶ್ರೀ.ಜಿ.ಅಶ್ವತ್ಥ್ ನಾರಾಯಣ | ಸದಸ್ಯರು |
| 5. | ಶ್ರೀ.ಕುಮಾರ್ | ಸದಸ್ಯರು |
| 6. | ಡಾ.ಪಿ.ಎಸ್.ಸುರೇಶ್ | ಸದಸ್ಯರು |
| 7. | ಡಾ.ಎಂ.ಪ್ರೀತಿ | ಸದಸ್ಯರು |
| 8. | ಡಾ.ಕೆ.ಕೆ.ವಿಶಾಲಾಕ್ಷಿ | ಸದಸ್ಯರು |
| 9. | ಡಾ.ನಾಗರಾಜು | ಸದಸ್ಯರು |
| 10. | ಶ್ರೀ ಕೆ.ಟಿ.ಕೃಷ್ಣೇಗೌಡ | ಸದಸ್ಯರು |
| 11. | ಪ್ರೊ.ಎನ್.ಎಂ.ತಳವಾರ್ | ಸದಸ್ಯರು |
| 12. | ಪ್ರೊ. ಹೆಚ್.ಟಿ.ಬಸವರಾಜಪ್ಪ | ಸದಸ್ಯರು |
| 13. | ಪ್ರೊ. ಜಿ.ನಾಗೇಂದ್ರಪ್ಪ | ಸದಸ್ಯರು |
| 14. | ಪ್ರೊ. ಡಿ.ಆನಂದ | ಸದಸ್ಯರು |
| 15. | ಪ್ರೊ.ಬಿ.ಎಸ್.ವಿಶ್ವನಾಥ್ | ಸದಸ್ಯರು |
| 16. | ಡಾ. ಎಸ್.ಮದಿಅಳಗನ್ | ಸದಸ್ಯರು |
| 17. | ಶ್ರೀ ನಾಗೇಶ್ ಕರಿಯಪ್ಪ | ಸದಸ್ಯರು |
| 18. | ಶ್ರೀ ಸಿ.ಎಸ್.ರಘು | ಸದಸ್ಯರು |
| 19. | ಡಾ.ಪಿ.ಸರಸ್ವತಿ, ಗ್ರಂಥಪಾಲಕರು | ಸದಸ್ಯರು |
| 20. | ಪ್ರೊ.ಸಿ.ರಾಮಸ್ವಾಮಿ, ನಿರ್ದೇಶಕರು, ವಿದ್ಯಾರ್ಥಿಕ್ಷೇಮಪಾಲನ | ಸದಸ್ಯರು |
| 21. | ಪ್ರೊ.ಎನ್.ಕೆ.ಲೋಕನಾಥ್, ನಿರ್ದೇಶಕರು, ಪಿ.ಎಂ.ಇ.ಬಿ. | ಸದಸ್ಯರು |
| 22. | ಡಾ.ಎಸ್.ಶ್ರೀಕಂಠಸ್ವಾಮಿ, ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ | ಸದಸ್ಯರು |
| 23. | ಡಾ.ಪಿ.ಕೃಷ್ಣಯ್ಯ, ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ | ಸದಸ್ಯರು |
| 24. | ಪ್ರೊ. ಕೆ.ಎಂ.ಮಹದೇವನ್ ಕುಲಸಚಿವ(ಪರೀಕ್ಷಾಂಗ) | ಸದಸ್ಯರು |
| 25. | ಪ್ರೊ.ಟಿ.ಎಸ್.ದೇವರಾಜು, ಹಣಕಾಸು ಅಧಿಕಾರಿಗಳು | ಸದಸ್ಯರು |
| 26. | ಪ್ರೊ. ಶಿವಪ್ಪ.ಆರ್. ಕುಲಸಚಿವರು | ಸದಸ್ಯ ಕಾರ್ಯದರ್ಶಿ |

**ವಿಶೇಷ ಆಹ್ವಾನಿತರು**

1. ಪ್ರೊ.ಮಹದೇವ, ಡೀನರು, ಕಲಾ ನಿಕಾಯ
2. ಪ್ರೊ.ಸಿ.ಬಸವರಾಜು, ಡೀನರು, ಕಾನೂನು ನಿಕಾಯ
3. ಪ್ರೊ. ಸದಾನಂದ ಎಂ ಯಮಕನಮರಡಿ, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ

ಸಭೆಗೆ ಹಾಜರಾಗದವರು

1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
2. ನಿರ್ದೇಶಕರು, ತಾಂತ್ರಿಕ ಶಿಕ್ಷಣ, ಕರ್ನಾಟಕ ಸರ್ಕಾರ
3. ಶ್ರೀ ಕೆ. ಟಿ. ಶ್ರೀಕಂಠೇಗೌಡ, ವಿಧಾನ ಪರಿಷತ್ ಸದಸ್ಯರು
4. ಡಾ. ವಿ. ಶಿವಪ್ರಸಾದ್
5. ಪ್ರೊ. ಶಿವಬಸವಯ್ಯ
6. ಶ್ರೀ ಬೆಳವಾಡಿ ಪ್ರಭಾಕರ್

ಮೊದಲಿಗೆ, ಮಾನ್ಯ ಕುಲಪತಿಗಳು ಮಾತನಾಡಿ ಇತ್ತೀಚೆಗೆ ದೈವಾಧೀನರಾದ ಪ್ರೊ.ಆರ್.ರುದ್ರಮ್ಮ, ಮಾಜಿ ಶಿಕ್ಷಣ ಮಂಡಳಿ ಸದಸ್ಯರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ನಿಧನಕ್ಕೆ ಸಂತಾಪ ಸೂಚಿಸಿ 2 ನಿಮಿಷಗಳ ಕಾಲ ಮೌನವನ್ನು ಆಚರಿಸಬೇಕೆಂದು ಸಭೆಯನ್ನು ಕೋರಿದರು. ಸಭೆಯು 2 ನಿಮಿಷಗಳ ಕಾಲ ಮೌನವನ್ನು ಆಚರಿಸಲಾಯಿತು.

ನಂತರ ಮಾತನಾಡಿದ ಮಾನ್ಯ ಕುಲಪತಿಗಳು ಶಿಕ್ಷಣ ಮಂಡಳಿಯ ಮೊದಲನೆಯ ಸಾಮಾನ್ಯ ಸಭೆಗೆ ಆಗಮಿಸಿರುವ ಎಲ್ಲಾ ಸದಸ್ಯರುಗಳನ್ನು ಹಾಗೂ ಪತ್ರಿಕಾ ಮಾಧ್ಯಮದವರನ್ನು ಹಾಗೂ ಮೈಸೂರು ವಿಶ್ವವಿದ್ಯಾನಿಲಯಕ್ಕೆ ನೂತನ ಕುಲಸಚಿವರಾಗಿ ನೇಮಕಗೊಂಡಿರುವ ಪ್ರೊ.ಆರ್.ಶಿವಪ್ಪ, ಸಮಾಜಕಾರ್ಯ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಹಾಗೂ ಹಣಕಾಸು ಅಧಿಕಾರಿಯಾಗಿ ನೇಮಕಗೊಂಡಿರುವ ಪ್ರೊ.ಟಿ.ಎಸ್.ದೇವರಾಜ, ವಾಣಿಜ್ಯ ವಿಭಾಗ, ಸ್ನಾತಕೋತ್ತರ ಕೇಂದ್ರ, ಹೇಮಗಂಗೋತ್ರಿ, ಹಾಸನ ಇವರುಗಳನ್ನು ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸಿ ಪರಿಚಯಿಸಿದರು.

ಶಿಕ್ಷಣ ಮಂಡಳಿಗೆ ಹೊಸದಾಗಿ ನಾಮನಿರ್ದೇಶನಗೊಂಡಿರುವ ಈ ಕೆಳಕಂಡ ಸದಸ್ಯರುಗಳನ್ನು ಸಭೆಗೆ ಪರಿಚಯಿಸಿ ಸ್ವಾಗತಿಸಲಾಯಿತು.

1. ಡಾ.ನಾಗರಾಜು, ಪ್ರಾಂಶುಪಾಲರು, ಬಿ.ಜಿ.ಎಸ್. ಶಿಕ್ಷಣ ಕಾಲೇಜು, ಕುವೆಂಪುನಗರ, ಮೈಸೂರು
2. ಶ್ರೀ ಕೃಷ್ಣೇಗೌಡ, ಪ್ರಾಂಶುಪಾಲರು, ಸರ್ಕಾರಿ ವಿಜ್ಞಾನ ಕಾಲೇಜು, ಹಾಸನ.

ಇದುವರೆವಿಗೂ ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಾಗಿ ಹಾಗೂ ಹಣಕಾಸು ಅಧಿಕಾರಿಗಳಾಗಿ ಹಾಗೂ ಶಿಕ್ಷಣ ಮಂಡಳಿ ಸದಸ್ಯರಾಗಿ ಸೇವೆ ಸಲ್ಲಿಸಿ ನಿರ್ಗಮಿಸಿರುವ ಈ ಕೆಳಕಂಡವರುಗಳ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

1. ಪ್ರೊ. ಲಿಂಗರಾಜ ಗಾಂಧಿ, ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು
2. ಪ್ರೊ. ಬಿ.ಮಹದೇವಪ್ಪ, ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ಶ್ರೀ ಅಪ್ಪಾಜಿಗೌಡ, ವಿಧಾನ ಪರಿಷತ್ ಸದಸ್ಯರು, ಬೆಂಗಳೂರು.
4. ಶ್ರೀ ಜಿ.ಯು.ಚನ್ನಬಸಪ್ಪ, ಪ್ರಾಂಶುಪಾಲರು, ಹೊಯ್ಸಳೇಶ್ವರ ಕಾಲೇಜು, ಅರಸೀಕೆರೆ.
5. ಡಾ.ರಾಜಗೋಪಾಲ್, ಪ್ರಾಂಶುಪಾಲರು, ವಿದ್ಯಾವಿಕಾಸ್ ಶಿಕ್ಷಣ ಕಾಲೇಜು, ಮೈಸೂರು.

ನಂತರ ಕಾರ್ಯಸೂಚಿಯನ್ನು ಕೈಗೆತ್ತಿಕೊಳ್ಳಲಾಯಿತು.

| ವಿಷಯ ಸಂಖ್ಯೆ: | ವಿಷಯ ಸಂಕ್ಷಿಪ್ತವಾಗಿ |
|---|---|
| I.1 | ದಿನಾಂಕ 07-06-2019ರಂದು ನಡೆದ ಶಿಕ್ಷಣ ಮಂಡಳಿಯ ಮೂರನೇ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವ ಬಗ್ಗೆ. |
| ತೀರ್ಮಾನ | **ದಿನಾಂಕ 07-06-2019ರಂದು ನಡೆದ ಶಿಕ್ಷಣ ಮಂಡಳಿ ಮೂರನೇ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸಲಾಯಿತು.** |
| II.1 | ಪ್ರೊ, ಹೆಚ್. ಎನ್. ಯಜುರ್‌ವೇದಿ ಇವರ ಹೆಸರಿನಲ್ಲಿ ನಗದು ಬಹುಮಾನ ದತ್ತಿ ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | **ಪ್ರೊ, ಹೆಚ್. ಎನ್. ಯಜುರ್‌ವೇದಿ ಇವರ ಹೆಸರಿನಲ್ಲಿ ನಗದು ಬಹುಮಾನ ದತ್ತಿ ಸ್ಥಾಪನೆ ಮಾಡುವುದನ್ನು ಒಪ್ಪಲಾಯಿತು.** |
| II.2 | ಶ್ರೀಮತಿ ಸುಧಾ ಜಿ. ಮತ್ತು ಪ್ರೊ, ಕೊಟ್ರೇಶ್ವರ ಜಿ ರವರ ಹೆಸರಿನಲ್ಲಿ ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | **ಶ್ರೀಮತಿ ಸುಧಾ ಜಿ. ಮತ್ತು ಪ್ರೊ, ಕೊಟ್ರೇಶ್ವರ ಜಿ ರವರ ಹೆಸರಿನಲ್ಲಿ ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡುವುದನ್ನು ಅನುಮೋದಿಸಲಾಯಿತು.** |
| II.3 | ಸಕ್ಕರೆ ತಂತ್ರಜ್ಞಾನ ವಿಭಾಗದ ರಜತ ಮಹೋತ್ಸವ ಹೆಸರಿನಲ್ಲಿ ನಗದು ಬಹುಮಾನ ದತ್ತಿ ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | **ಸಕ್ಕರೆ ತಂತ್ರಜ್ಞಾನ ವಿಭಾಗದ ರಜತ ಮಹೋತ್ಸವ ಹೆಸರಿನಲ್ಲಿ ನಗದು ಬಹುಮಾನ ದತ್ತಿ ಸ್ಥಾಪನೆ ಮಾಡುವುದನ್ನು ಒಪ್ಪಲಾಯಿತು.** |
| II.4 | ಸಕ್ಕರೆ ತಂತ್ರಜ್ಞಾನ ವಿಭಾಗದ ರಜತ ಮಹೋತ್ಸವ ಹೆಸರಿನಲ್ಲಿ ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | **ಸಕ್ಕರೆ ತಂತ್ರಜ್ಞಾನ ವಿಭಾಗದ ರಜತ ಮಹೋತ್ಸವ ಹೆಸರಿನಲ್ಲಿ ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡುವುದನ್ನು ಒಪ್ಪಲಾಯಿತು.** |
| II.5 | ದಿವಂಗತ ಜಿ.ಎಸ್. ದೊಡ್ಡ ಅರ್ಕೇಶ್ವರ ಮೂರ್ತಿ ಎಂ.ಎ. ಹೆಸರಿನಲ್ಲಿ ನಗದು ಬಹುಮಾನ ದತ್ತಿ ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | **ದಿವಂಗತ ಜಿ.ಎಸ್. ದೊಡ್ಡ ಅರ್ಕೇಶ್ವರ ಮೂರ್ತಿ ಎಂ.ಎ. ಹೆಸರಿನನಲ್ಲಿ ನಗದು ಬಹುಮಾನ ದತ್ತಿ ಸ್ಥಾಪನೆ ಮಾಡುವುದನ್ನು ಒಪ್ಪಲಾಯಿತು.** |
| II.6 | ದಿವಂಗತ ಶ್ರೀಮತಿ ದೇವಿರಮ್ಮ ಸಿ. ಶಿವಣ್ಣ ಇವರ ಹೆಸರಿನಲ್ಲಿ ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | **ದಿವಂಗತ ಶ್ರೀಮತಿ ದೇವಿರಮ್ಮ ಸಿ. ಶಿವಣ್ಣ ಇವರ ಹೆಸರಿನಲ್ಲಿ ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡುವುದನ್ನು ಒಪ್ಪಲಾಯಿತು.** |
| II.7 | ಶ್ರೀ ಬಿ.ಕೆ. ಶಿವಣ್ಣ ರವರ ಹೆಸರಿನಲ್ಲಿ ದತ್ತಿ ಉಪನ್ಯಾಸ ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | **ಶ್ರೀ ಬಿ.ಕೆ. ಶಿವಣ್ಣ ರವರ ಹೆಸರಿನಲ್ಲಿ ದತ್ತಿ ಉಪನ್ಯಾಸ ಸ್ಥಾಪನೆ ಮಾಡುವುದನ್ನು ಒಪ್ಪಲಾಯಿತು.** |

| | |
|---|---|
| II.8 | ಮೈಸೂರು ವಿಶ್ವವಿದ್ಯಾನಿಲಯದ ನ್ಯಾಯ ಶಾಲೆಯಲ್ಲಿ ಬಿ.ಕಾಂ. ಎಲ್.ಎಲ್.ಬಿ ಐದು ವರ್ಷದ ಇಂಟಿಗ್ರೇಟೆಡ್ ಕೋರ್ಸ್‌ನ ವಿನಿಯಾಮಾವಳಿಗಳ ಅನುಮೋದನೆ ಬಗ್ಗೆ. |
| | ಪ್ರೊ.ಡಿ.ಆನಂದ್, ಡೀನರು, ವಾಣಿಜ್ಯ ನಿಕಾಯರವರು ಬಿ.ಕಾಂ., ಎಲ್.ಎಲ್.ಬಿ ಐದು ವರ್ಷದ ಇಂಟಿಗ್ರೇಟೆಡ್ ಕೋರ್ಸ್‌ನ ಬಗ್ಗೆ ವಿವರಣೆಯನ್ನು ಬಯಸಿದರು.<br><br>ಪ್ರೊ.ಬಿ.ಎಸ್.ವಿಶ್ವನಾಥ್ ರವರು ಮಾತನಾಡಿ ಬಿ.ಕಾಂ ವಿಷಯವು ವಾಣಿಜ್ಯ ನಿಕಾಯಕ್ಕೆ ಸಂಬಂಧಪಟ್ಟಿದ್ದು ಹಾಗೂ ಕಾನೂನು ವಿಷಯವು ಕಾನೂನು ನಿಕಾಯಕ್ಕೆ ಸಂಬಂಧಪಟ್ಟಿದಾಗಿರುವುದರಿಂದ ವಿವರಣೆಯನ್ನು ನೀಡಬೇಕೆಂದು ಕೋರಿದರು.<br><br>ಮಾನ್ಯ ಕುಲಪತಿಯವರು ವಾಣಿಜ್ಯ ಹಾಗೂ ಕಾನೂನು ವಿಷಯಗಳನ್ನು ಬೋಧಿಸಲು ಆಯಾಯಾ ವಿಷಯದ ಬೋಧಕರುಗಳಿಂದ ಪಾಠಗಳನ್ನು ಬೋಧಿಸಲಾಗುತ್ತಿದೆ ಎಂದು ತಿಳಿಸಿದರು.<br><br>ಪ್ರೊ.ಜಿ.ನಾಗೇಂದ್ರಪ್ಪನವರು ಮಾತನಾಡಿ ಬಿ.ಕಾಂ. ಎಲ್.ಎಲ್.ಬಿ ಐದು ವರ್ಷದ ಇಂಟಿಗ್ರೇಟೆಡ್ ಕೋರ್ಸಿಗೆ ಸಂಬಂಧಿಸಿದಂತೆ Regulations ಗೆ ತಿದ್ದುಪಡಿ/ಬದಲಾವಣೆಗಳನ್ನು ಮಾಡಿರುವ ಬಗ್ಗೆ ಸಭೆಗೆ ತಿಳಿಸಬೇಕೆಂದು ಕೋರಿದರು. ವಾಣಿಜ್ಯ ಹಾಗೂ ಕಾನೂನು ಶಿಕ್ಷಕರಿಂದ ವಿಷಯಗಳನ್ನು ಬೋಧಿಸಲಾಗುವುದೆಂಬ ಷರತ್ತುಗಳನ್ನು ವಿನಿಯಮವಳಿಗಳಲ್ಲಿ ಸೇರಿಸಬೇಕೆಂದು ಸೂಚಿಸಿದರು.<br><br>ಪ್ರೊ.ಸಿ.ಬಸವರಾಜು, ಡೀನರು ಕಾನೂನು ನಿಕಾಯರವರು ಮಾತನಾಡಿ ಬಿ.ಎ., ಎಲ್.ಎಲ್.ಬಿ ಮತ್ತು ಬಿ.ಕಾಂ.ಎಲ್.ಎಲ್.ಬಿ ಬೇರೆ ಬೇರೆ ಕೋರ್ಸುಗಳಾಗಿದ್ದು, ಬಿ.ಎ., ಎಲ್.ಎಲ್.ಬಿ ಕೋರ್ಸನ್ನು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಈಗಾಗಲೇ ಪ್ರಾರಂಭ ಮಾಡಿದ್ದು, ಬಿ.ಕಾಂ.ಎಲ್.ಎಲ್.ಬಿ ಇಂಟಿಗ್ರೇಟೆಡ್ ಕೋರ್ಸನ್ನು ಪ್ರಾರಂಭಿಸಲು ಸರ್ಕಾರದ ಅನುಮೋದನೆಗಾಗಿ ವಿನಿಯಮಗಳನ್ನು ಕಳುಹಿಸಲಾಗಿತ್ತು. ಆದರೆ, ಸರ್ಕಾರವು ದಿನಾಂಕ 29-05-2019ರಂದು ವಿಶ್ವವಿದ್ಯಾನಿಲಯಕ್ಕೆ ಪತ್ರವನ್ನು ಬರೆದು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯ ಅಧಿನಿಯಮ 2009ರ ಕಲಂ 6(ii)ರ ಪ್ರಕಾರ ಬಿ.ಕಾಂ.ಎಲ್.ಎಲ್.ಬಿ ಇಂಟಿಗ್ರೇಟೆಡ್ ಕೋರ್ಸನ್ನು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಾರಂಭಿಸಲು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಅನುಮತಿಯನ್ನು ಪಡೆದಿರುವ ಬಗ್ಗೆ ಮಾಹಿತಿಯನ್ನು ಒದಗಿಸಲು ಹಾಗೂ ಪ್ರಸ್ತಾವನೆಯು 2016-17ನೇ ಸಾಲಿಗೆ ಸಂಬಂಧಿಸಿದ್ದರಿಂದ ಪರಿನಿಯಮಗಳನ್ನು ಹೊಸದಾಗಿ ಸಿದ್ಧಪಡಿಸಲು ಕೋರಿತ್ತು. ಸರ್ಕಾರದ ಆದೇಶದನ್ವಯ, ಬಿ.ಕಾಂ.ಎಲ್.ಎಲ್.ಬಿ ಇಂಟಿಗ್ರೇಟೆಡ್ ಕೋರ್ಸ್‌ಗೆ ಸಂಬಂಧಿಸಿದ ವಿನಿಯಮವನ್ನು ಪರಿಷ್ಕರಿಸಿ ಸರ್ಕಾರಕ್ಕೆ ಕಳುಹಿಸಿಕೊಡಲು ದಿನಾಂಕ 28-06-2019ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ಪಡೆಯಲಾಗಿತ್ತು. ಈಗ ವಿದ್ಯಾವಿಷಯ ಪರಿಷತ್ ಸಭೆಯ ಮುಂದೆ ಮಂಡಿಸಲಾಗಿದ್ದು ಅನುಮತಿಸಬೇಕೆಂದು ಸಭೆಯನ್ನು ಕೋರಿದರು.<br><br>ಪ್ರೊ.ಜಿ.ನಾಗೇಂದ್ರಪ್ಪನವರು ಮಾತನಾಡಿ B.Com LL.B Integrated Course ಗಳನ್ನು ಬೋಧಿಸಲು ಖಾಲಿ ಇರುವ ಹುದ್ದೆಗೆ ಬೋಧಕ ವರ್ಗದವರನ್ನು ನೇಮಕಾತಿ ಮಾಡುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಬೇಕೆಂದು ಮಾನ್ಯ ಕುಲಪತಿಗಳನ್ನು ಕೋರಿದರು.<br>ಮಾನ್ಯ ಕುಲಪತಿಗಳು ಮಾತನಾಡಿ ವಿಶ್ವವಿದ್ಯಾನಿಲಯ ನ್ಯಾಯಶಾಲೆಯಲ್ಲಿ ಪ್ರಾರಂಭಿಸಿರುವ ಬಿಕಾಂ.ಎಲ್.ಎಲ್.ಬಿ ಐದು ವರ್ಷದ ಇಂಟಿಗ್ರೇಟ್‌ಡ್ ಕೋರ್ಸಿನ ಪರಿಷ್ಕೃತ ವಿನಿಯಾಮಾವಳಿಗಳಿಗೆ ಕರ್ನಾಟಕ ವಿಶ್ವವಿದ್ಯಾನಿಲಯ ಕಾಯ್ದೆ 2000ರ ಅಡಿಯಲ್ಲಿ ಕೋರ್ಸನ್ನು ಪ್ರಾರಂಭಿಸಿರುವುದರಿಂದ ಸರ್ಕಾರಕ್ಕೆ ಪರಿಷ್ಕೃತ ವಿನಿಯಮವಳಿಗಳನ್ನು ಅನುಮೋದನೆಗಾಗಿ ಕಳುಹಿಸಲಾಗುವುದು ಎಂದು ಸಭೆಗೆ ತಿಳಿಸಿದರು. |
| ತೀರ್ಮಾನ | ಬಿಕಾಂ.ಎಲ್.ಎಲ್.ಬಿ ಐದು ವರ್ಷದ ಇಂಟಿಗ್ರೇಟ್‌ಡ್ ಕೋರ್ಸಿನ ಪರಿಷ್ಕೃತ ವಿನಿಯಮಾವಳಿಗಳನ್ನು ಸರ್ಕಾರದ ಅನುಮೋದನೆಗೆ ಕಳುಹಿಸಲು ಸಭೆಯು ಅನುಮೋದಿಸಿತು. |

| | |
|---|---|
| II.9 | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ಪೋರ್ಟ್ಸ್ ಕೋಟದ ಅರ್ಹತಾ ನಿಯಮಗಳನ್ನು ಕ್ರೀಡಾ ನೀತಿ ಕೈಪಿಡಿಯಲ್ಲಿ ಮಾರ್ಪಡಿಸಿದ್ದು, ಸದರಿ ಪರಿಷ್ಕೃತ ಕ್ರೀಡಾ ನೀತಿ ಕೈಪಿಡಿಗೆ ಅನುಮೋದನೆ ಬಗ್ಗೆ. |
| | ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕರಾದ ಡಾ.ಪಿ.ಕೃಷ್ಣಯ್ಯರವರು ಈ ಬಗ್ಗೆ ಸಭೆಯಲ್ಲಿ ವಿವರಿಸುತ್ತಾ, ಕ್ರೀಡೆಯಲ್ಲಿ ಸಾಧನೆಯನ್ನು ಮಾಡಿದ 15 ಕ್ರೀಡಾ ಪಟುಗಳಿಗೆ ವಿಶೇಷ ಕೋಟಾದಡಯಲ್ಲಿ ಸೀಟು ಹಂಚಿಕೆ ಮಾಡಲಾಗುತ್ತಿದೆ. ಈ ನಿಯಮದಲ್ಲಿ ಕೆಲವು ಕ್ರೀಡೆಗಳಿಗೆ ಅವಕಾಶವನ್ನು ಕಲ್ಪಿಸಿಲ್ಲದಿರುವುದರಿಂದ ಇವುಗಳನ್ನು ಸೇರಿಸಿ ಹೊಸದಾಗಿ ಅಂಕ ಹಂಚಿಕೆ ಮಾಡಲಾಗಿದೆ ಎಂದರು.<br><br>ಪ್ರೊ.ಜಿ.ನಾಗೇಂದ್ರಪ್ಪನವರು ಮಾತನಾಡಿ ಸದರಿ ಪರಿಷ್ಕೃತ ಕ್ರೀಡಾ ನೀತಿ ಕೈಪಿಡಿಯನ್ನು ವಿದ್ಯಾವಿಷಯಕ ಪರಿಷತ್ತಿನ ಎಲ್ಲಾ ಸದಸ್ಯರಿಗೆ ತಲುಪಿಸಲು ದೈಹಿಕ ಶಿಕ್ಷಣದ ನಿರ್ದೇಶಕರಿಗೆ ಕೋರಿದರು. |
| ತೀರ್ಮಾನ | **ಪರಿಷ್ಕೃತ ಕ್ರೀಡಾ ನೀತಿ ಕೈಪಿಡಿಯನ್ನು ಅನುಮೋದಿಸಲಾಯಿತು.** |
| II.10 | MOOCS ಕೋರ್ಸ್‌ಗಳಿಗೆ Principles of Genetics ಮತ್ತು Human Genetics ಕೋರ್ಸ್‌ಗಳನ್ನು ಸೇರ್ಪಡಿಸುವ ಬಗ್ಗೆ. |
| | ಪ್ರೊ.ಎನ್.ಬಿ.ರಾಮಚಂದ್ರ, ಅಧ್ಯಕ್ಷರು, ತಳಿಶಾಸ್ತ್ರ ಅಧ್ಯಯನ ವಿಭಾಗದವರು ಪಠ್ಯಕ್ರಮಗಳನ್ನು ಸಿದ್ಧಪಡಿಸಿರುವುದನ್ನು ಶ್ಲಾಘಿಸಿದ ಪ್ರೊ.ಜಿ.ನಾಗೇಂದ್ರಪ್ಪನವರು ಸದರಿ ವಿಷಯವನ್ನು ನಡವಳಿಗಳಲ್ಲಿ ದಾಖಲಿಸಬೇಕೆಂದು ಹೇಳಿದರು. |
| ತೀರ್ಮಾನ | **ಸ್ನಾತಕ ಕೋರ್ಸಿಗೆ Principles of Genetics ಮತ್ತು Human Genetics ಪತ್ರಿಕೆ/ಕೋರ್ಸ್‌ಗಳನ್ನು MOOCS ಕೋರ್ಸ್‌ಗಳಿಗೆ ಅಳವಡಿಸಲು ಅನುಮೋದಿಸಲಾಯಿತು.** |
| II.11 | 2019–20ನೇ ಶೈಕ್ಷಣಿಕ ಸಾಲಿಗೆ ಶಿಕ್ಷಣ ಕಾಲೇಜುಗಳಿಗೆ ಪುನರ್ ಪರಿಶೀಲನಾ ಸಮಿತಿಯ ಶಿಫಾರಸ್ಸಿನ ಆಧಾರ ಒಂದು ಸೆಕ್ಷನ್ ಬದಲಿಗೆ ಎರಡು ಸೆಕ್ಷನ್ 100 ಸಂಖ್ಯೆ ವಿದ್ಯಾರ್ಥಿಗಳ ಪ್ರವೇಶಾತಿಗೆ ವಿಸ್ತರಣಾ ಸಂಯೋಜನಾ ಆದೇಶ ಹೊರಡಿಸಿರುವುದು ಕುರಿತು ಅನುಸಮರ್ಥನೆ ಬಗ್ಗೆ. |
| | ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ ಇವರು ಮಾತನಾಡಿ, St.Joseph College of Teachers Education, Mandya, AET College of Education, Mandya, and Mandvya College of Education, Mandya ಕಾಲೇಜುಗಳಿಗೆ 2019–20ನೇ ಶೈಕ್ಷಣಿಕ ಸಾಲಿಗೆ Two basic units of 50 students each B.Ed. Programme (100 ಸಂಖ್ಯೆ) ವಿದ್ಯಾರ್ಥಿಗಳ ತಾತ್ಕಾಲಿಕ ಮುಂದುವರಿಕೆ ವಿಸ್ತರಣಾ ಸಂಯೋಜನೆ ಆದೇಶಗಳಿಗೆ ಸಭೆಯು ಅನುಸಮರ್ಥನೆ ನೀಡಬೇಕೆಂದು ಕೋರಿದರು.<br><br>ಪ್ರೊ.ಮಹದೇವ್‌ರವರು ಮಾತನಾಡಿ ವೈಜ್ಞಾನಿಕವಾಗಿ ಎರಡು ಪ್ರತ್ಯೇಕ ತರಗತಿಗಳನ್ನು ಹಾಗೂ ವಿದ್ಯಾರ್ಥಿಗಳ ಅನುಪಾತಕ್ಕೆ ಅನುಗುಣವಾಗಿ ಬೋಧಕರನ್ನು ನೇಮಿಸಲು ಹಾಗೂ ಶೈಕ್ಷಣಿಕ ಗುಣಮಟ್ಟಕ್ಕೆ ಧಕ್ಕೆಯಾಗದಂತೆ ವಿಶ್ವವಿದ್ಯಾನಿಲಯವು ಜವಾಬ್ದಾರಿಯನ್ನು ವಹಿಸಿಕೊಂಡು ಈ ನಿಟ್ಟಿನಲ್ಲಿ ಶಾಶ್ವತ ಪರಿಹಾರವನ್ನು ಒದಗಿಸಲು ಸೂಚಿಸಿದರು ಹಾಗೂ ಸಿಬ್ಬಂದಿಗೆ ಬ್ಯಾಂಕ್ ಮೂಲಕ ವೇತನವನ್ನು ಪಾವತಿಸಿ ಸದರಿ ದಾಖಲೆಗಳನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ಕಾಲೇಜುಗಳಿಗೆ ಸೂಚಿಸಬೇಕೆಂದು ಇಲ್ಲದಿದ್ದಲ್ಲಿ ವಿದ್ಯಾ ಸಂಸ್ಥೆಯವರು ಹಾಲಿ ಸಿಬ್ಬಂದಿಯನ್ನೇ ಬಳಸಿ, ಒಂದೇ ತರಗತಿಯಲ್ಲೇ ಬೋಧನೆ ನಡೆಸುವ ಸಾಧ್ಯತೆಗಳಿದ್ದು ಇದು ವಿದ್ಯಾರ್ಥಿಗಳ ಮತ್ತು ಬೋಧಕರ ಶೋಷಣೆಗೆ ಕಾರಣವಾಗಲಿದ್ದು ಇಂತಹ ದೂರುಗಳು ಬರದಂತೆ ನೋಡಿಕೊಳ್ಳುವಂತೆ ಸಹ ತಿಳಿಸಿದರು.<br><br>ಶ್ರೀ ನಾಗೇಶ್ ಕರಿಯಪ್ಪ, ಮತ್ತು ಶ್ರೀ ರಘುರವರು ಮಾತನಾಡಿ ಸಂಪೂರ್ಣ ಇನ್ಸಿಟ್ಯೂಟ್ ಆಫ್ ಅಗ್ರಿಕಲ್ಚರ್ ಸೈನ್ಸ್ ಕಾಲೇಜು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿರದ ವಿಳಾಸದಲ್ಲಿ ನಡೆಸುತ್ತಿರುವುದರ ಬಗ್ಗೆ ಸಭೆಯ ಗಮನಕ್ಕೆ ತರಲಾಗಿ, ಮಾನ್ಯ ಕುಲಪತಿಯವರು ಈ ಬಗ್ಗೆ ಪರಿಶೀಲಿಸುವುದಾಗಿ ತಿಳಿಸಿದರು.<br><br>ಪ್ರೊ. ಜಿ. ನಾಗೇಂದ್ರಪ್ಪನವರು ಮಾತನಾಡಿ, ವಿಶ್ವವಿದ್ಯಾನಿಲಯವು ನಿಗಧಿಪಡಿಸಿರುವ ಸೀಟುಗಳ ಸಂಖ್ಯಾಮಿತಿಯನ್ನು ಕಾಲೇಜುಗಳು ಕಡ್ಡಾಯವಾಗಿ ಪಾಲಿಸಲು ಕ್ರಮಕೈಗೊಳ್ಳುವಂತೆ ಮಾನ್ಯ ಕುಲಪತಿಗಳನ್ನು ಕೋರಿದರು. |

| | |
|---|---|
| | ಮಾನ್ಯ ಕುಲಪತಿಗಳು ಮಾತನಾಡಿ, ಕೆಲವು ಷರತ್ತುಗಳೊಡನೆ ಸಂಯೋಜನೆ ನೀಡಲಾಗುವುದೆಂದು ಹಾಗೂ 10 ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚಿಸಿ, ಕಾಲೇಜುಗಳಿಗೆ ಹಠಾತ್ ಭೇಟಿ ನೀಡಿ ಪರಿಶೀಲಿಸಲಾಗುವುದೆಂದು ಸಭೆಗೆ ತಿಳಿಸಿದರು. |
| ತೀರ್ಮಾನ | **2019–20ನೇ ಶೈಕ್ಷಣಿಕ ಸಾಲಿಗೆ ಶಿಕ್ಷಣ ಕಾಲೇಜುಗಳಿಗೆ ಪುನರ್ ಪರಿಶೀಲನಾ ಸಮಿತಿಯ ಶಿಫಾರಸ್ಸಿನ ಆಧಾರದ ಒಂದು ಸೆಕ್ಷನ್ ಬದಲಿಗೆ ಎರಡು ಸೆಕ್ಷನ್ 100 ಸಂಖ್ಯೆ ವಿದ್ಯಾರ್ಥಿಗಳ ಪ್ರವೇಶಾತಿಗೆ ವಿಸ್ತರಣಾ ಸಂಯೋಜನೆಯನ್ನು ಅನುಸಮರ್ಥಿಸಲಾಯಿತು.** |
| II.12 | ಪ್ರೊ. ಬಿ. ನಾಗಪ್ಪ ಅಭಿನಂದನಾ ನಗದು ಬಹುಮಾನ ದತ್ತಿ ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | **ಪ್ರೊ. ಬಿ. ನಾಗಪ್ಪ ಅಭಿನಂದನಾ ನಗದು ಬಹುಮಾನ ದತ್ತಿ ಸ್ಥಾಪನೆ ಮಾಡುವುದನ್ನು ಒಪ್ಪಲಾಯಿತು.** |
| II.13 | ಪ್ರೊ. ಪಿ.ಕೆ. ಪಾಟೀಲ್, ವಿಶ್ವವಿದ್ಯಾನಿಲಯದ ಗ್ರಂಥಪಾಲಕರು ಮತ್ತು ಅಧ್ಯಕ್ಷರು ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ ಎಂಬ ಹೆಸರಿನಲ್ಲಿ ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | **ಪ್ರೊ. ಪಿ.ಕೆ. ಪಾಟೀಲ್, ವಿಶ್ವವಿದ್ಯಾನಿಲಯದ ಗ್ರಂಥಪಾಲಕರು ಮತ್ತು ಅಧ್ಯಕ್ಷರು ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ ಎಂಬ ಹೆಸರಿನಲ್ಲಿ ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡುವುದನ್ನು ಒಪ್ಪಲಾಯಿತು.** |
| 11.14 | ವಿಶ್ವವಿದ್ಯಾನಿಲಯದ 2018–19ನೇ ಸಾಲಿನ ವಾರ್ಷಿಕ ವರದಿಯ ಪರಿಶೀಲನೆ ಬಗ್ಗೆ |
| | ಪ್ರೊ.ಜಿ.ನಾಗೇಂದ್ರಪ್ಪರವರು ವಾರ್ಷಿಕ ವರದಿಯ ಮೇಲೆ ಮಾತನಾಡುತ್ತಾ, 2018–19ರ ವಾರ್ಷಿಕ ವರದಿಯ ಮುದ್ರಿತ (Hard copy) ಪ್ರತಿಗಳನ್ನು ಕಳುಹಿಸಿರುವುದಿಲ್ಲ, ಬದಲಾಗಿ ಸಾಫ್ಟ್ ಪ್ರತಿ ಕಳುಹಿಸಲಾಗಿದೆ. ಇದರಲ್ಲಿನ 20 ಪುಟಗಳನ್ನು ತೆರೆದು ನೋಡಿದಾಗ ಅನೇಕ ತಪ್ಪುಗಳು ಕಂಡು ಬಂದಿದೆ. ಉಳಿದ ಪುಟಗಳಲ್ಲೂ ಸಹ ತಪ್ಪುಗಳು ಇರುವ ಸಾಧ್ಯತೆ ಇದೆ. ಆದ್ದರಿಂದ ಇಡೀ ವರದಿಯನ್ನು ಪರಿಶೀಲನೆ ಮಾಡದೆ ಅನುಮೋದನೆ ನೀಡುವುದು ಸರಿಯಲ್ಲ ಎಂದು ಆಕ್ಷೇಪಿಸಿದರು.<br><br>ಪ್ರೊ.ಮಹದೇವ ರವರು ಮಾತನಾಡಿ ವಿಭಾಗಗಳ DC Meetings ನಲ್ಲಿ ಅನುಮೋದಿಸಿ ಬಂದಿರುವ ಮಾಹಿತಿಯ ಆಧಾರದ ಮೇಲೆ ವಾರ್ಷಿಕ ವರದಿಯನ್ನು ಸಿದ್ಧಪಡಿಸಿ, ನಿಕಾಯಗಳ ಡೀನರ ಸಮಿತಿಯು ಸಹ ಪರಿಶೀಲಿಸಿದ್ದು ಇದು ಕರಡು ಪ್ರತಿಯಾಗಿರುವುದರಿಂದ ಪುನ: ವರದಿಯನ್ನು ಪರಿಶೀಲಿಸಿ, ತಿದ್ದುಪಡಿ ಮಾಡಿದ ನಂತರವಷ್ಟೇ ಸರ್ಕಾರಕ್ಕೆ ಕಳುಹಿಸಲಾಗುವುದು ಎಂದು ಹೇಳಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, 2018–19ನೇ ಸಾಲಿನ ವಾರ್ಷಿಕ ವರದಿಯನ್ನು ಸಿದ್ಧಪಡಿಸುವುದಕ್ಕೆ ಒಂದು ಸಮಿತಿಯನ್ನು ರಚಿಸಿ ವರದಿಯನ್ನು ಸಿದ್ದಪಡಿಸಲಾಗಿದೆ. ಇದನ್ನು ಪುನ: ಸಮಿತಿಯು ಪರಿಶೀಲಿಸಿ ಸೂಕ್ತ ತಿದ್ದುಪಡಿಯಾದ ನಂತರ ಸರ್ಕಾರಕ್ಕೆ ಕಳುಹಿಸಲಾಗುವುದೆಂದು ತಿಳಿಸಿದರು. |
| ತೀರ್ಮಾನ | **ವಿಶ್ವವಿದ್ಯಾನಿಲಯದ 2018–19ನೇ ಸಾಲಿನ ವಾರ್ಷಿಕ ವರದಿಯಲ್ಲಿ ತಿದ್ದುಪಡಿಯೊಂದಿಗೆ ಮಾರ್ಪಾಡು ಮಾಡಿದ ನಂತರ ಸರ್ಕಾರಕ್ಕೆ ಕಳುಹಿಸಲು ತೀರ್ಮಾನಿಸಲಾಯಿತು.** |

ಇತರೆ ವಿಷಯಗಳು:

The following informations were brought to the notice of Academic Council by the Hon'ble Vice-Chancellor.

1. A separate Board of Studies will be constituted for Distance Education Programme and also it is proposed to extend some relaxation in admission to the students who join Distance Programmes on par with IGNOU, as some applications have been received for admission during this academic year and it will be continued from next academic year also to encourage more and more students to opt for Distance Education programmes.
2. To encourage the students to publish more and more research papers and undertake research, provision was made in the IOE project from 2007-2016. Now a days the publication of research papers and the students interest to undertake and research work are dwindling. Hence, the University is proposes to introduce 20 research fellowships at Vignan Bhavan to encourage the students to publish research papers and a sum of Rs.12,000/- per month will be paid to the selected researchers.
3. From the next Academic Council meeting of the proceedings will be conducted through the digital mode by providing i-pad to the members.
4. Provision has been made for the construction of a separate hostel for research scholars and it will be ready for occupation during 2020. Action is also being initiated to repair/furnishing the existing hostels.
5. Class room space for the department of Bio-technology, Computer Science and Kuvempu Institute of Kannada Studies. The work of extension of class rooms will be taken up shortly.
6. A committee has been constituted to establish University Centenary Museum and it will be equipped and ready for use by next 6 months.

ತೀರ್ಮಾನ: ಮೇಲಿನ ಇತರೆ ವಿಷಯಗಳನ್ನು (01 ರಿಂದ 06) ಕುಲಪತಿಗಳು ಸಭೆಯ ಮುಂದೆ ಮಂಡಿಸಿ ವಿವರಿಸಿದ ನಂತರ, ಸಭೆಯು ಈ ವಿಷಯಗಳನ್ನು ಗಮನಿಸಿ ಒಪ್ಪಿಗೆಯನ್ನು ನೀಡಿತು.

ಕೊನೆಯಲ್ಲಿ ಮಾನ್ಯ ಕುಲಪತಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ಸಹಿ/-
ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು

ಸಹಿ/-
ಕುಲಪತಿಗಳು ಹಾಗೂ ಅಧ್ಯಕ್ಷರು